BRIDGE ACROSS AYANOOR-MALUR ROAD

39. Sri S. M. SHEERANALY CHANDRASEKHAR (Hosanagar).—

Will the Minister for Public Works and Electricity be pleased to state:—

the reasons for the delay in the construction work of the bridge at Arualli Manganese Mines between the road from Ayanoor to Hanageri and on to Malur in Shimoga Taluk?

Sri H. M. CHANNABASAPPA (Minister for Public Works and Electricity).—

The work was completed during November 1971, though there was some delay due to foundations problem.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸದರಿ ಕಾಮಗಾರಿಯನ್ನು 1971ರ ನವೆಂಬರ್ ತಿಂಗಳಲ್ಲಿ ಪೂರ್ತಿಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಇದು ನನ್ನ ಕ್ಷೇತ್ರವಾದ್ದರಿಂದ, 1972ರಲ್ಲಿ ನಡೆದ ಚುನಾವಣೆಯ ಸಮಯದಲ್ಲಿ ಆ ಭಾಗದಲ್ಲಿ ಪ್ರವಾಸ ಕೈಕೊಂಡಿದ್ದಾಗ ಆ ಕೆಲಸ ವಾಗಿಲ್ಲ ಎಂದು ತಿಳಿದುಕೊಂಡು ಪ್ರಶ್ನೆ ಕೇಳಿದ್ದೆ. ಆದರೆ ಈ ಕೆಲಸ 1971ರಲ್ಲಿಯೇ ಆಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಅಂದಮೇಲೆ ಇದರಲ್ಲಿ ಯಾವುದು ನಿಜ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಬಂದಿರುವ ವರದಿಯ ಪ್ರಕಾರ ಆ ಕೆಲಸ ಪೂರೈಸಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಮಗೆ ಬಂದಿರುವ ವರದಿಯ ಸತ್ಯಾಸತ್ಯತೆ ಯನ್ನು ಪುನರ್ ಪರಿಶೀಲನೆ ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ಕೊಟ್ಟಿರುವ ಉತ್ತರ ಸರಿಯಿಲ್ಲ ಎಂದು ತಾವು ಹೇಳುವು ದರೆ ಪುನರ್‌ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಜಿ. ಎಂ. ಮಂಜುನಾಥ್.—ಈ ಸೇತುವೆಯ ಕೆಲಸ ಪ್ರಾರಂಭವಾಗಿದ್ದು ಯಾವಾಗ ಮತ್ತು ಮುಕ್ತಾಯವಾಗಿದ್ದು ಯಾವಾಗ ಎಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—1971ರ ನವೆಂಬರ್ ತಿಂಗಳಲ್ಲಿ ಈ ಕೆಲಸ ಮುಕ್ತಾಯ ವಾಯಿತು. ಇದು ಸ್ಯಾಂಕ್ಷನ್ ಆಗಿದ್ದು 1970-71ರಲ್ಲಿ. ಅಂದರೆ ಒಂದು ವರ್ಷದ ಹಿಂದೆ.

KALLODU DAM IN SHIMOGA TALUK

48. Sri K. YENKATAPPA (Shikaripur).—

Will the Minister for Public Works and Electricity be pleased to state:—

(*a*) whether plans and estimates have been prepared in respect of Kallodu dam in Shimoga Taluk;

(*b*) if so, the amount of estimates, the extent, of lands to be irrigated and when the work would be started?

Sri H. M. CHANNABASAPPA (Minister for Public Works and Electricity).—

(*a*) Yes.

(*b*) Rs. 51.8 lakhs as per 1965 rates.
About 3,100 Acres.

After the award of Krishna Water Disputes Tribunal is known and depending on funds available.

ಶ್ರೀ ಕೆ. ಯಂಕಟಪ್ಪ.—1965ನೇ ಇಸವಿಯ ದರಗಳ ಮೇರೆಗೆ 51.8 ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಈಗಿನ ಅಂದಾಜು ಎಷ್ಟು ಎಂದು ಹೇಳುತ್ತೀರಾ ?

†ಶ್ರೀ ಎಚ್. ಎನ್. ನಂಜೇಗೌಡ.–ಅದನ್ನು ಪುನರ್‌ಪರಿಶೀಲನೆ ಮಾಡಿ ಬೇರೆ ಅಂದಾಜು ಮಾಡ ಬೇಕೆಂದು ವಾಪಸ್ ಕಳಿಸಿಕೊಟ್ಟಿದ್ದೇವೆ. ಮತ್ತು ಕೃಷ್ಣಾ ನದಿ ನೀರಿಗೆ ಸಂಬಂಧಿಸಿದ ನ್ಯಾಯಾಧಿಕರಣದವರ ತೀರ್ಪು ಬರುವವರೆಗೆ ಇದನ್ನು ತಡೆಹಿಡಿಯಬೇಕೆಂದು ಹೇಳಿದ್ದೇವೆ.

ಶ್ರೀ ಕೆ. ಯಂಕಟಪ್ಪ.—ಅವರ ತೀರ್ಪು ಬರಲು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಎಚ್. ಎನ್. ನಂಜೇಗೌಡ.—ಅವರ ತೀರ್ಪು ಇನ್ನು 6 ತಿಂಗಳೊಳಗೆ ಬರುತ್ತದೆಂದು ಅಂದಾಜಿದೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಶಿವಮೊಗ್ಗ ಜಿಲ್ಲೆಯ ಕಡ್ಲೆ ಒಡ್ಡು ಮತ್ತು ಶೀಗೆಹಳ್ಳ ಅಣೆಕಟ್ಟುಗಳ ವಿಚಾರದಲ್ಲಿಯೂ ಸಹ ಇದೇ ರೀತಿಯ ಉತ್ತರವನ್ನು ಕೊಟ್ಟಿದ್ದೀರಿ ಮತ್ತು ಆ ಭಾಗದ ರೈತರಿಗೆ ನೀರಿನ ಅನುಕೂಲವನ್ನು ಕಲ್ಪಿಸಿಕೊಡದಿದ್ದರೂ ಲೆವಿ ಮತ್ತು ನೀರಿನ ಕಂದಾಯ ಹಾಕರಾಗುತ್ತಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎನ್. ನಂಜೇಗೌಡ.—ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—51.8ಲಕ್ಷ ರೂಪಾಯಿಗಳ ಈ ಯೋಜನೆಯಿಂದ ಕೇವಲ 3100 ಎಕರೆಗಳು ನೀರಾವರಿಯಾಗುವುದರಿಂದ, ಇದು ದುಬಾರಿ ಯೋಜನೆಯಲ್ಲವೆ?

ಶ್ರೀ ಎಚ್. ಎನ್. ನಂಜೇಗೌಡ.—ದುಬಾರಿಯಾಗುತ್ತದೆ ಎಂಬ ಅಭಿಪ್ರಾಯ ಇರುವುದರಿಂದ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇವೆ. ಮತ್ತು ಈ ವಿಚಾರ ಕೃಷ್ಣಾ ನದಿ ನೀರಿಗೆ ಸಂಬಂಧಿಸಿದ ನ್ಯಾಯಾಧಿಕರಣದವರ ಮುಂದೆ ಇರುವುದರಿಂದ, ಅವರ ತೀರ್ಪು ಬರುವವರೆಗೆ ತಡೆಹಿಡಿಯಬೇಕೆಂದು ಹೇಳಲಾಗಿದೆ.

ಶ್ರೀ ಕೆ. ಯಂಕಟಪ್ಪ.—ಈ ಅಣೆಕಟ್ಟನ್ನು ಮಾಡಿದರೆ ಇಲ್ಲಿನ ಲಭಾವ ಪ್ರದೇಶದ ಜನರಿಗೆ ಅನುಕೂಲವಾಗುತ್ತದೆ. ಆದುದರಿಂದ ಇದನ್ನು ಕಾರ್ಯರೂಪಕ್ಕೆ ತರಲು ಈಗಲಾದರೂ ಪ್ರಯತ್ನ ಮಾಡಿ ಸರಕಾರ ಪರಿಶೀಲಿಸುತ್ತದೆಯೇ ?

ಶ್ರೀ ಹೆಚ್. ಎನ್. ನಂಜೇಗೌಡ.—ಸೂಚನೆಯನ್ನು ಪರಿಶೀಲಿಸಲಾಗುತ್ತದೆ.

TRANSPORT FACILITIES TO VILLAGES OF SADALGA CONSTITUENCY.

165. Sri J. S. AMMANNAVAR (Sadalga).—

Will the Minister for Labour be pleased to state :—

(*a*) the names of the Villages and hamlets with their population that are not connected with State Transport buses in the Sadalga Constituency ;